ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 139-142
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

ಹೆಣ್ಣು, ಮದುವೆ ಮತ್ತು ವಲಸೆ

ಡಾ.ಕೆ.ವಿ.ನೇತ್ರಾವತಿ
ಕುಂಬಾರಹಳ್ಳಿ ಗ್ರಾಮ, ಟಮಕ ಅಂಚೆ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ಕೋಲಾರ

Abstract:
ಪ್ರಪಂಚದಾದ್ಯಂತ ವಿವಾಹದ ಕಾರಣಕ್ಕೆ ಹೆಚ್ಚು ವಲಸೆಗೆ ಒಳಗಾಗುವವರೆಂದರೆ ಮಹಿಳೆಯರು. 2001ರ ಜನಗಣತಿ ಪ್ರಕಾರ ಮದುವೆಯ ಕಾರಣಕ್ಕೆ ವಲಸೆ ಹೋದ ಮಹಿಳೆಯರ ಸಂಖ್ಯೆ 98.6% ಇದ್ದರೆ, 2011 ರ ಜನಗಣತಿ ಪ್ರಕಾರ 97% ರಷ್ಟು ಇದ್ದಾರೆ. ಮದುವೆಯ ಕಾರಣದಿಂದ ಮಹಿಳೆಯರು ತಾಯಿ ಮನೆಯಿಂದ ಗಂಡನ ಮನೆಗೆ ವಲಸೆ ಹೋಗಿ ಮತ್ತೆ ಗಂಡನು ಕೆಲಸ ಮಾಡುವ ಸ್ಥಳಕ್ಕೆ ವಲಸೆ ಹೋಗುವ ಮೂಲಕ ವಲಸೆಯೊಳಗಿನ ವಲಸೆಯ ಸ್ಥಿತಿಯಲ್ಲಿ ಮಹಿಳೆಯರಿದ್ದಾರೆ. ಮದುವೆಯಿಂದ ಆಗುವ ವಲಸೆ ಭಾರತದಲ್ಲಿ ಅತಿ ದೊಡ್ಡ ಸ್ವರೂಪದಲ್ಲಿದೆ. ಇದು ಗ್ರಾಮೀಣ ನಗರ ಎನ್ನುವ ಯಾವ ತಾರತಮ್ಯವೂ ಇಲ್ಲದೇ ಎಲ್ಲಾ ಮಹಿಳೆಯರು ಈ ವಲಸೆಯ ಬಲೆಗೆ ಬಲಿಯಾಗುತ್ತಾರೆ. ಮಹಿಳೆಯರಿಗೆ ವಲಸೆ ಎಂಬುದು ದೊಡ್ಡ ಸಾಂಸ್ಕೃತಿಕ ಆಘಾತವಾಗಿದೆ.

Keywords: *ಹೆಣ್ಣು, ಮದುವೆ, ವಲಸೆ, ಸಾಮಾಜಿಕ ವ್ಯವಸ್ಥೆ, ಕುಟುಂಬ ಪದ್ಧತಿ*

ಪೀಠಿಕೆ

ಹೆಣ್ಣಿಗೆ ಅವಳು ನಡೆಯುವ ನಡತೆಯಿಂದ, ಹಾಕುವ ಬಟ್ಟೆಯಿಂದ, ಮಾತಾಡುವ ಮಾತಿನಿಂದ, ಮಾಡೋ ಕೆಲಸದಿಂದ ಎಳೆ ಎಳೆಯನ್ನು ಹಿಡಿದು ಜಾಲಾಡಿ 'ಇಲ್ಲಿ ಚೆನ್ನಾಗಿ ಕಲಿತರೇನೇ ಗಂಡನ ಮನೆಯಲ್ಲಿ ಚೆನ್ನಾಗಿ ಬದುಕೋಕಾಗೋದು, ಇಲ್ಲಂದ್ರೆ ಅವರು ನಿನ್ನನ್ನು ಮೂರು ದಿನ ಇಟ್ಟುಕೊಳ್ಳದೀರ ಓಡಿಸಾಕ್ತಾರೆ. ಆಮೇಲೆ 'ಯಾರು ನಿನಗೆ ಬುದ್ಧಿ ಕಲಿಸಿದ್ದು' ಅಂತ ನಮ್ಮನ್ನೇ ಬೈತಾರೆ. ಈವಾಗಿಂದಾನೆ ಕೆಲಸಾನ ಚೆನ್ನಾಗಿ ಕಲಿಬೇಕು. ಅವಾಗೇನೆ ಹೋದಕಡೆ ನೀನು ಸೈ ಅಂತ ಅನಿಸಿಕೊಳ್ಳೋದು, ಪರವಾಗಿಲ್ಲಪ್ಪ ಚೆನ್ನಾಗಿ ಬೆಳೆಸವರೆ ಅಂತ ಅನಿಸ್ಕೊಳ್ಳೋದು', ಎಂದು ಪದೇ ಪದೇ ಹೇಳಿ, ನಿನ್ನದು ಈ ಮನೆ ಅಲ್ಲ, ನಿನ್ನ ಮನೆ ಬೇರೆ ಎನ್ನುವ ಮನಸ್ಥಿತಿಯನ್ನು ಹುಟ್ಟಿನೊಟ್ಟಿಗೆ ಬೆಳೆಸುವುದರಿಂದ ಹೆಣ್ಣು ಮಕ್ಕಳಿಗೆ ಅಮ್ಮನ ಮನೆ ಸ್ವಂತ ಮನೆ ಅಲ್ಲ ಎಂದು ಹೇಳುತ್ತಲೇ ಬೆಳೆಸುತ್ತಾರೆ. ಅಲ್ಲಿ ಹೆಣ್ಣಿನ ಅತಂತ್ರದ ನಡುಗೆರೆ ಕಾಯ್ದು ಕುಳಿತು ಇದು ನಿನ್ನ ಸ್ವಂತ ಮನೆ ಅಂತ ತಿಳಿಯಬೇಡ ಎಂದು ದೂರ ತಳ್ಳುವ, ಅಂತರ ಕಾಯ್ದುಕೊಳ್ಳುವ ಸ್ಥಿತಿ ಏರ್ಪಾಡಾಗುತ್ತದೆ. ಇಂತಹ ಸ್ಥಿತಿಯ ನಡೆಯಲ್ಲಿ ನಾನು ಹುಟ್ಟಿದ ಮನೆ ನನ್ನ ಸ್ವಂತ ಮನೆ, ಆ ಊರು ನನ್ನ ಸ್ವಂತ ಊರು ಎಂದು ಹೆಣ್ಣುಮಕ್ಕಳು ತಿಳಿಯುವುದಾದರೂ ಹೇಗೆ?

ಮದುವೆಯಾದ ಮೇಲೆ 'ನಿಮ್ಮ ಮಗಳನ್ನು ಯಾವ ಊರಿಗೆ ಕೊಟ್ಟಿರಿ' ಎಂದು ಕೇಳಿದರೆ, ನನ್ನ ಅಪ್ಪ, ಅಮ್ಮ 'ನಮ್ಮ ಮಗಳನ್ನು ಇಂತ ಊರಿಗೆ

Please cite this article as: ನೇತ್ರಾವತಿ, ಕೆ.ವಿ. (2026). ಹೆಣ್ಣು, ಮದುವೆ ಮತ್ತು ವಲಸೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(6), 139–142

ಕೊಟ್ಟೆವು ಅಂತ ಹೇಳುತ್ತಾರೆ. ಬೇರೆಯವರು ತಂದೆ ತಾಯಿಗಳಿಗೆ 'ಮದುವೆ ಮಾಡಿ ಕೈ ತೊಳಕೊಂಡ್ರಿ' ಅಂತ ಹೇಳುವಾಗ, ಆ ತರಹದ ಮಾತುಗಳನ್ನು ಕೇಳಿಸಿಕೊಂಡಾಗ ನನಗೆ ಎಲ್ಲಿಲ್ಲದ ದುಃಖ ಆಗಿದೆ. ಹೆಣ್ಣು ಮನುಷ್ಯಳಾ? ವಸ್ತುವಾ? 'ಕೊಟ್ಟೆವು', 'ಕೊಡುತ್ತೇವೆ', 'ತಗೊಂಡು ಬಂದೆವು' ಎನ್ನುವ ಮಾತುಗಳನ್ನು ಬಳಸುವುದು ವಸ್ತುವಿಗೆ. ಹಾಗಾದರೆ ಈ ಸಮಾಜ ಹೆಣ್ಣನ್ನು 'ವಸ್ತು'ವಾಗಿ ನೋಡುತ್ತೆ. ಮನುಷ್ಯಳ ಹಾಗೆ ನೋಡುವುದಿಲ್ಲ ಎಂಬುದು ಹಲವು ವಿಚಾರಗಳಲ್ಲಿ ಸಾಬೀತಾಗಿದೆ. 'ಹೆಣ್ಣಿನ ಗೋಳಟ್ಟಿ ಬನ್ನೀಯ ಮರಬೆಂದೋ' ಎಂಬಂತೆ ಅವಳ ಬದುಕಿನ ಇಡೀ ನಡೆ ವಲಸೆಯ ಗೋಳು.

ಮದುವೆಯಿಂದ ಆಗುವ ವಲಸೆ ಭಾರತದಲ್ಲಿ ಅತಿ ದೊಡ್ಡ ಸ್ವರೂಪದಲ್ಲಿದೆ. ಇದು ಗ್ರಾಮೀಣ ನಗರ ಎನ್ನುವ ಯಾವ ತಾರತಮ್ಯವೂ ಇಲ್ಲದೇ ಎಲ್ಲಾ ಮಹಿಳೆಯರು ಈ ವಲಸೆಯ ಬಲೆಗೆ ಬಲಿಯಾಗುತ್ತಾರೆ. ಮಹಿಳೆಯರಿಗೆ ವಲಸೆ ಎಂಬುದು ದೊಡ್ಡ ಸಾಂಸ್ಕೃತಿಕ ಆಘಾತವಾಗಿದೆ. ಅತ್ತೆಯ ಮನೆಗೆ ಹೋಗಿ ಅಲ್ಲಿ ಅತ್ತೆ ಮಾವ, ಗಂಡ ಎಲ್ಲರನ್ನೂ ಪ್ರೀತಿಸಿದರೂ ತನ್ನ ಅಪ್ಪ, ಅಮ್ಮನ ಪ್ರೀತಿಯಿಂದ ವಂಚಿತರಾಗುತ್ತಾರೆ. ಅಂತಹ ಒತ್ತಡವನ್ನು ಅವರು ನಿಭಾಯಿಸಲು ಶ್ರಮ ಪಡುತ್ತಾರೆ.

ಭಾರತ ದೇಶದ ಬಹುಪಾಲು ಹೆಣ್ಣುಮಕ್ಕಳನ್ನು ಪಿತೃಪ್ರಧಾನ ಮನಸ್ಥಿತಿಯನ್ನು ಒಪ್ಪಿಕೊಳ್ಳುವ ಹಾಗೆ ಬೆಳೆಸುವುದರಿಂದ ಮದುವೆ ಎನ್ನುವುದು ಹೆಣ್ಣಿನ ವಲಸೆ ಎಂದರೂ ಅದನ್ನು ಅವರು ಒಪ್ಪಿಕೊಳ್ಳಲು ತಯಾರಿಲ್ಲದಷ್ಟು ಪಿತೃಪ್ರಧಾನ ಮೌಲ್ಯಗಳನ್ನು ತಮ್ಮಲ್ಲಿ ಲೀನವಾಗಿಸಿಕೊಂಡಿದ್ದಾರೆ. ಪಿತೃಪ್ರಧಾನ ಮೌಲ್ಯದ ವಿವಾಹ ವಲಸೆಯು ತನ್ನ ತಾಯಿ ಮನೆಯ ವಾಸಸ್ಥಳದಿಂದ ಗಂಡನ ಮನೆಗೆ ಸ್ಥಳಾಂತರಗೊಳ್ಳುವ ಪ್ರಜ್ಞೆಯನ್ನು ಪ್ರಚೋದಿಸುತ್ತದೆ. ಮತ್ತು ನಿನ್ನ ಸ್ವಂತ ಮನೆ ತಾಯಿ ಮನೆಯಿಂದ ಗಂಡನ ಮನೆಗೆ ಬದಲಾಗಿದೆ ಎಂದು ಹೇಳುತ್ತದೆ. ಮನೆ ಅಷ್ಟೇ ಅಲ್ಲದೇ ತನಗೆ ಮೊದಲಿದ್ದ ಎಲ್ಲಾ ಗುರುತುಗಳು ಬದಲಾಗಿ ಆ ಬದಲಿ ಜಾಗಕ್ಕೆ ಗಂಡನ ಕುಲ, ಜಾತಿ, ಗೋತ್ರ, ಧರ್ಮ, ಪ್ರದೇಶ, ಭಾಷೆ ಎಲ್ಲವೂ ಹೊಸದಾಗಿ ಬಂದು ಸೇರಿಕೊಳ್ಳುತ್ತವೆ. ಅವುಗಳನ್ನು ಹೆಣ್ಣು ತನ್ನ ಹೊಸ ಗುರುತುಗಳಾಗಿ ಮಾಡಿಕೊಳ್ಳಬೇಕಾಗುತ್ತದೆ. ಹೊಸ ಗುರುತುಗಳಾಗಿ ಸೇರಿಸಿಕೊಳ್ಳಬೇಕಾಗುತ್ತದೆ. ಅವಳಿಗೆ ಅದು ಒಪ್ಪಿಗೆ ಇರಲಿ ಇಲ್ಲದಿರಲಿ, ಒಪ್ಪೊಕೊಳ್ಳಬೇಕೆಂದು ಸಮಾಜ ಅವಳನ್ನು ಒತ್ತಾಯಿಸುತ್ತದೆ. ಮದುವೆಯ ಕಾರಣಕ್ಕೆ ಅವೆಲ್ಲವೂ ಅವಳಿಗೆ ಬೋನಸ್ ಆಗಿ ಮಾರ್ಪಡುತ್ತದೆ. ಇದಕ್ಕೆ ಮಹಿಳೆ ತನ್ನ ಬದುಕನ್ನೇ ತೇಯ್ದು ಹೊಂದಾಣಿಕೆ ಮಾಡಿಕೊಳ್ಳುತ್ತಾಳೆ. ಹೊಂದಾಣಿಕೆಯಾಗದ ಹೆಣ್ಣನ್ನು ಸಮಾಜ 'ಗಡಿ ಮೀರಿದವಳು', 'ಕೆಟ್ಟವಳು', 'ಗಂಡುಬೀರಿ' ಎಂಬ ವಿಶ್ಲೇಷಣೆಗಳಿಂದ ನಿಂದಿಸುತ್ತದೆ.

ಭಾರತದಲ್ಲಿರುವ ವಿವಾಹದ ವಲಸೆಗೆ ಬಹು ಮುಖ್ಯ ಕಾರಣವೆಂದರೆ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಂಶಗಳಾಗಿವೆ. ಸಮಾಜಕ್ಕೆ ಸಾಂಪ್ರದಾಯಿಕತೆಗೆ ಭಯಪಡುವ ಮನಸ್ಥಿತಿ ಇರುವ ಭಾರತೀಯ ಕುಟುಂಬಗಳು ಮದುವೆ ಮಾಡುವ ಸಲುವಾಗಿ ಉದ್ಯೋಗ ಮಾಡುವ ಮಹಿಳೆಯರನ್ನು ಕೆಲಸದಿಂದ ಬಿಡಿಸಿ ಮದುವೆ ಮಾಡುತ್ತಾರೆ. ಓದುವುದನ್ನು ನಿಲ್ಲಿಸಿ ಮದುವೆ ಮಾಡುತ್ತಾರೆ. (ಹೆಣ್ಣು ಓದಿದರೆ ಮುಸುರೆ ತಿಕ್ಕುವುದು ತಪ್ಪುವುದಿಲ್ಲ ಎಂಬ ಮನಸ್ಥಿತಿ) ಮದುವೆಯ ನಂತರ ಅವಳು ಉದ್ಯೋಗಕ್ಕೆ ಹೋಗದೆ ಮನೆ ಕೆಲಸ ಮಾಡಿಕೊಂಡು ಇರುವಂತೆ ಮಾಡುತ್ತದೆ. ಕೂಲಿ ರಹಿತ ದುಡಿಮೆ ಅವಳನ್ನು ಮಾನಸಿಕವಾಗಿ ಹಿಂಸಿಸುತ್ತದೆ. ಹೊಟ್ಟೆಪಾಡಿಗಾಗಿ ವಲಸೆ ಹೋದ ಕಾರ್ಮಿಕರಿಗೂ, ಮದುವೆಯಿಂದ ವಲಸೆ ಹೋದ ಮಹಿಳೆಯರಿಗೂ ಇಲ್ಲಿ ಯಾವುದೇ ವ್ಯತ್ಯಾಸ ಇಲ್ಲಿ ಕಾಣಿಸುವುದಿಲ್ಲ.

ಮಹಿಳೆಗೆ ನಿಸರ್ಗ ನೀಡಿದ ವಿಶಿಷ್ಟ ಕೊಡುಗೆ ಎಂದರೆ ಅದು ಫಲವಂತಿಕೆ. ಆಕೆಗೆ ಸಮಾಜದಲ್ಲಿ ಸ್ಥಾನಮಾನವೇನಾದರೂ ದೊರೆತಿದ್ದರೆ ಅದು ಈ

ಕಾರಣದಿಂದಾಗಿಯೇ ಎಂಬುದು ವಿದಿತ. ಅನೇಕ ಹೆಣ್ಣುಮಕ್ಕಳು ಚಿಕ್ಕ ವಯಸ್ಸಿಗೇನೆ ಮದುವೆಯಾಗುವುದರಿಂದ ಅವರು ಬೇಗನೆ ತಾಯಂದಿರಾಗುವುದರಿಂದ ಆರೋಗ್ಯದ ವಿಷಯದಲ್ಲಿ ಅನೇಕ ಸಂಕಷ್ಟಗಳನ್ನು ಅವರು ಎದುರಿಸಬೇಕಾಗುತ್ತದೆ. ಹೆಣ್ಣಿಗೆ ಮಕ್ಕಳಾಗದ ಸಂದರ್ಭಗಳಲ್ಲಿ ಅವಳನ್ನು ತುಂಬಾ ಕೆಟ್ಟದಾಗಿ ನಡೆಸಿಕೊಳ್ಳಲಾಗುತ್ತದೆ. ಅಂತಹ ಹೆಣ್ಣನ್ನು ಮನೆಯ ಒಬ್ಬ ಸದಸ್ಯಳೆಂದು ಕೂಡ ಪರಿಗಣಿಸದಿರುವ ಮನಸ್ಥಿತಿ ಭಾರತೀಯರದು. ಭಾರತೀಯರಲ್ಲಿ ಮದುವೆಯ ಉದ್ದೇಶ ಲೈಂಗಿಕ ತೃಪ್ತಿಗಿಂತ ಮುಖ್ಯವಾಗಿ ಸಂತಾನ ಮುಂದುವರಿಕೆಯಾಗಿದೆ. 'ಉತ್ತಲ್ಲದೆ ಮಣ್ಣಲ್ಲ ಎತ್ತಲ್ಲದೆ ತಾಯಲ್ಲ' ಎನ್ನುವ ನುಡಿಗಟ್ಟುಗಳು ಮದುವೆಯ ಸಾರ್ಥಕತೆ ಮಕ್ಕಳನ್ನು ಹೆರುವುದರಲ್ಲಿದೆ ಎಂದು ಹೇಳುತ್ತದೆ.

ಬಾಲಕರಿಲ್ಲದ ಬಾಲ್ಯದ್ಯಾತರ ಜನ್ಮ
ಬಾಡೀಗಿ ಎತ್ತು ದುಡಿದಂಗ ಬಾಳೆಲೆಯ
ಹಾಸ್ಯುಂಡು ಬೀಸಿ ಒಗೆದಂಗ

ಇಂತಹ ಅನೇಕ ಜನಪದ ತ್ರಿಪದಿಗಳು ಹೆಣ್ಣಿನ ಮದುವೆಯ ವಲಸೆಯ ಸ್ಥಿತಿಯನ್ನು ಸಮರ್ಥವಾಗಿ ಧ್ವನಿಸುತ್ತವೆ. ಮಕ್ಕಳಿಲ್ಲದ ಮಹಿಳೆ, ಅದರಲ್ಲೂ ಗಂಡು ಮಕ್ಕಳನ್ನು ಹೆರದ ಮಹಿಳೆ ಸಮಾಜದ ಕ್ರೂರ ವ್ಯವಸ್ಥೆಗೆ ಬೀಳಬೇಕಾಗುತ್ತದೆ. ಸಂತಾನ ಹೀನತೆಗೆ ಗಂಡಿನ ದೋಷವಿದ್ದ ಸಂದರ್ಭದಲ್ಲಿಯೂ ಪುರುಷ ಪ್ರಧಾನ ಸಮಾಜ ಅದನ್ನು ಮುಚ್ಚಿ ಹಾಕಿ ಆ ದೋಷವನ್ನು ಹೆಣ್ಣಿನ ತಲೆಗೆ ಕಟ್ಟಿ ಆಕೆಯನ್ನು ಬಂಜೆ, ಗೊಡ್ಡಿ ಎಂದು ಕರೆದು ನಿಕೃಷ್ಟವಾಗಿ ಕಾಣುತ್ತದೆ. 'ಪುಣ್ಯವಂತರಿಗೆ ಫಲಗೋಲೆ ಎಲೆ ಹೆಣ್ಣೆ ಪಾಪಗೆಟ್ಟವರಿಗೆ ಫಲವಿಲ್ಲ' ಎಂದು ಹೇಳುವ ಮೂಲಕ ಫಲವಂತಿಕೆಯ ಕೊರತೆಯನ್ನು ಪಾಪಪುಣ್ಯಗಳ ಪರಿಕಲ್ಪನೆಯೊಂದಿಗೆ ಜೋಡಿಸಿ ತನ್ನ ಪೌರುಷದ ನೀಚತನವನ್ನು ಮೆರೆಯುವ ಸಮಾಜದ ಮಾನಗೇಡಿ ಮುಖವನ್ನು ಮೌಖಿಕ ಚರಿತ್ರೆ ಮನಮಿಡಿಯುವಂತೆ ಚಿತ್ರಿಸುತ್ತದೆ.

ಪ್ರಧಾನ ಸಂಸ್ಕೃತಿಯು ಹೇರಿರುವ ಮೌಲ್ಯವನ್ನು ಒಪ್ಪಿಕೊಂಡಂತೆ ಕಾಣುವ ಈ ಮಹಿಳೆಯರು ಅದರ ಪೂರೈಕೆಗಾಗಿ ಅದೇ ಸಂಸ್ಕೃತಿಯು ಪ್ರತಿಪಾದಿಸುವ ಪಾತಿವ್ರತ್ಯದ ಮೌಲ್ಯವನ್ನು ತಿರಸ್ಕರಿಸಿ, ತನ್ನ ಗಂಡನನ್ನು ಬಿಟ್ಟು ಇನ್ನೊಬ್ಬ ಗಂಡಸಿಂದ ಮಗುವನ್ನು ಪಡೆದು ಪ್ರತಿಭಟನೆ ತೋರಿದ್ದಾರೆ. ದೇವರಿಗೆ ಹರಕೆ ತೀರಿಸುವ ಹೆಸರಲ್ಲಿ ಒಂದು ರೀತಿಯ ನಿಯೋಗವನ್ನು ಮಾಡುವ ಸಂಪ್ರದಾಯ ರೂಡಿಯಲ್ಲಿದೆ. ಸಿರಿಜಾತ್ರೆ, ನಂಜನಗೂಡು ತೇರಡಿ ಸೇವೆ, ಪೂಜಾರಿ ಸೇವೆ ಎಂಬಂತಹ ಆರಾಧನೆಗಳು ನಿಯೋಗವನ್ನು ಕುರಿತು ಮಾತಾಡುತ್ತವೆ. ಗಂಡು ತನ್ನ ದೈಹಿಕ ದೋಷವನ್ನು ರಹಸ್ಯವಾಗಿಡಲು ಈ ಬಗೆಯ ಮಿಲನಕ್ಕೆ ಒಪ್ಪಿಗೆ ನೀಡಿರುವ ಕುರಿತು ಇವು ಮಾತಾಡುತ್ತವೆ.

ಮಹಿಳೆಯರು ವಿದ್ಯಾವಂತರಾದಂತೆ, ಆರ್ಥಿಕ ಸ್ವಾವಲಂಬಿಗಳಾದಂತೆ, ಅಧಿಕಾರ ಪಡೆದಂತೆ ಮಾತೃತ್ವದ ಹಕ್ಕು ಮಹಿಳೆಯರದು ಎನ್ನುವುದನ್ನು ನಿರಾಕರಿಸಿ ತಾಯ್ತನದ ಆಯ್ಕೆ ಮಹಿಳೆಯರದು ಎನ್ನುವ ನೋಟ ಸ್ತ್ರೀ ಚಳುವಳಿ ಬಲಗೊಂಡಂತೆಲ್ಲಾ ಬಲಗೊಂಡಿತು. ಮಾತೃತ್ವದ ಅನಿವಾರ್ಯತೆಯನ್ನು ನಿರಾಕರಿಸಿದ ಹೆಣ್ಣು ಮಕ್ಕಳು ಈಗಲೂ ನಮ್ಮೊಂದಿಗಿದ್ದಾರೆ. ಆದರೆ ಇವರ ಸಂಖ್ಯೆ ಬಹಳವಿಲ್ಲವೆಂಬುದು ಇಲ್ಲಿನ ಫಲವಂತಿಕೆಗೆ ಸಂಬಂಧಿಸಿದ ವಸ್ತುಸ್ಥಿತಿಯನ್ನು ವಿವರಿಸುತ್ತದೆ.

ಮದುವೆಗಾಗಿ ಹೆಣ್ಣನ್ನು ಖರೀದಿಸುವ ಅತಿರೇಕದ ಸಾಂಸ್ಕೃತಿಕ ವಿದ್ಯಮಾನದಲ್ಲಿ ಮಹಿಳೆಯರು ಕೊರತೆ ಇರುವ ಸ್ಥಳಗಳಲ್ಲಿ ಪುರುಷರನ್ನು ಮದುವೆಯಾಗಲು ಮಹಿಳೆಯರನ್ನು ಇತರ ಪ್ರದೇಶಗಳಿಂದ ಖರೀದಿಸುವುದರಿಂದ ಇದು ಮಹಿಳೆಯ ವಲಸೆಯ ಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತದೆ. ಇಂತಹ ಮಹಿಳೆಯರನ್ನು ದೂರದ ಪ್ರದೇಶಗಳಿಂದ ಖರೀದಿಸಿ

ಕರೆ ತರಲಾಗುತ್ತದೆ. ಇವರು ಹೆಚ್ಚಾಗಿ ಅನಕ್ಷರಸ್ತರಾಗಿರುವುದರಿಂದ, ಭಿನ್ನವಾಗಿ ಯೋಚಿಸಲಾರದವರಾಗಿ ಲೈಂಗಿಕವಾಗಿ ಹೆಚ್ಚು ಶೋಷಣೆಗೆ ಒಳಗಾಗುತ್ತಾರೆ. ಒಬ್ಬನಿಗಾಗಿ ಖರೀದಿಸಿದರೂ ಅವಳನ್ನು ಲೈಂಗಿಕವಾಗಿ ಬಳಸುವವರು ಅಣ್ಣ ತಮ್ಮಂದಿರೆಲ್ಲರೂ ಆಗುತ್ತಾರೆ. ಇದು ವಿವಾಹ ವಲಸೆಯ ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತದೆ. ಇಂತಹ ಮಹಿಳೆಯರು ಅನಿವಾರ್ಯವಾಗಿ ಬಲವಂತದ ವಲಸೆಗೆ ಒಳಗಾಗುತ್ತಾರೆ.

ಮದುವೆಯ ವಲಸೆಯಿಂದ ಉಂಟಾಗುವ ನಿರ್ದಿಷ್ಟ ಸಮಸ್ಯೆಗಳನ್ನು ಪರಿಹರಿಸಲು ಯಾವುದೇ ನೀತಿಗಳು ಈಗ ಜಾರಿಯಲಿಲ್ಲ ಎನ್ನುವುದು ದುರಂತ. 2005 ರ ಕೌಟುಂಬಿಕ ದೌರ್ಜನ್ಯ ಕಾಯಿದೆಯಲ್ಲಿ ಗಂಡನ ಮನೆಯಿಂದ ಮಹಿಳೆಗೆ ಯಾವುದೇ ಅನ್ಯಾಯ ಆದರೂ ಅವಳು ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಬಹುದೆಂದು ಹೇಳುತ್ತದೆ. ಗಂಡನ ಆಸ್ತಿಯಲ್ಲಿ ಭಾಗ ತೆಗೆದುಕೊಳ್ಳಬಹುದೆಂದು, ಜೀವನಾಧಾರಕ್ಕೆ ಮನವಿ ಸಲ್ಲಿಸಬಹುದೆಂದು ಹೇಳುತ್ತದೆ. ಆದರೆ ಇಲ್ಲಿ ಒಂದು ಸಮಸ್ಯೆ ಇದೆ. ಭಾರತೀಯ ಸಾಂಪ್ರದಾಯಿಕತೆಯಲ್ಲಿ ಹೆಣ್ಣನ್ನು ವಿವಾಹ ಮಾಡಿಕೊಡುವುದು ಗಂಡನಿಗೆ ಮಾತ್ರವಲ್ಲ. ಅವಳನ್ನು ಅವನ ಇಡೀ ಕುಟುಂಬಕ್ಕೆ ವಿವಾಹ ಮಾಡಿಕೊಡಲಾಗುತ್ತದೆ. ಗಂಡನ ಹೆಸರಿನಲ್ಲಿ ಆಸ್ತಿ ಇಲ್ಲದೆ, ಅತ್ತೆಮಾವನ ಹೆಸರಿನಲ್ಲಿ ಆಸ್ತಿ ಇದ್ದಾಗ ಆ ಮಹಿಳೆ 2005 ರ ಕಾಯ್ದೆ ಪ್ರಕಾರ ಅವಳು ಆಸ್ತಿಯನ್ನು ಕೇಳುವ ಆಗಿಲ್ಲ. ಆದರೆ ಮದುವೆ ವಿಷಯಕ್ಕೆ ಅವಳಿಗೆ ಆದ ಅನ್ಯಾಯವನ್ನು ಸರಿಪಡಿಸುವುದಾದರೂ ಹೇಗೆ?

ಹೆಣ್ಣು ನೋಡಲು ಬಂದಾಗ ಹೆಣ್ಣಿಗೆ ಹೆಣ್ಣಿನ ಮನೆಯವರಿಗೆ ನಮಗೆ ಇಷ್ಟು ಮನೆ ಇದೆ, ಇಷ್ಟು ಆಸ್ತಿ ಇದೆ ಎಂದು ಹೇಳಿ ತೋರಿಸಿಯೇ ಮದುವೆ ಮಾಡಿಕೊಂಡು ಹೋಗುತ್ತಾರೆ. ಆದರೆ ಮದುವೆಯಾದ ಮೇಲೆ ಸಮಸ್ಯೆಯಾದಾಗ ನಿನ್ನ ಗಂಡನ ಹೆಸರಿನಲ್ಲಿ ಆಸ್ತಿ ಇಲ್ಲ ಅದಕ್ಕಾಗಿ ನಿನಗೆ ಆಸ್ತಿ ಕೇಳುವ ಹಕ್ಕಿಲ್ಲ ಎಂದು ಹೇಳುತ್ತಾರೆ. ಕಾಯಿದೆಯೂ ಇದಕ್ಕೆ ಪುಷ್ಟಿಕೊಡುತ್ತದೆ. ಇಂತಹ ಸಂದರ್ಭದಲ್ಲಿ ಮಹಿಳೆ ಏನು ಮಾಡಬೇಕು? ತನಗೆ ಪರಿಹಾರ ಕೇಳಲು ಎಲ್ಲಿಗೆ ಹೋಗಬೇಕು? ಹೇಗೆ ಕೇಳಬೇಕು? ಗಂಡನೂ ಕೂಡ ಉದ್ಯೋಗದಲ್ಲಿದ್ದೇನೆಂದು ಸುಳ್ಳು ಹೇಳಿ ಮದುವೆಮಾಡಿಕೊಂಡು ಹೋಗಿರುತ್ತಾನೆ. ಆಗ ಮಹಿಳೆ ಪರಿಹಾರವನ್ನು ಎಲ್ಲಿ ಹೇಗೆ ತೆಗೆದುಕೊಳ್ಳುವುದು? ಇದು ಮದುವೆಯಿಂದ ವಲಸೆಗೆ ಒಳಗಾದ ಮಹಿಳೆಗೆ ದೊಡ್ಡ ತೊಡಕಾಗಿ ಪರಿಣಮಿಸಿದೆ. ಈ ನಿಟ್ಟಿನಲ್ಲಿ 2005 ರ ಕೌಟುಂಬಿಕ ದೌರ್ಜನ್ಯ ವಿರೋದಿ ಕಾಯಿದೆಯನ್ನು ತಿದ್ದುಪಡಿಮಾಡಬೇಕಾಗಿದೆ. ಹೆಣ್ಣಿನ ವಲಸೆಗೆ ಸಂಬಂಧಿಸಿದಂತೆ "ವಿಶೇಷ ಮಹಿಳಾ ವಲಸೆ ಕಾಯ್ದೆ"ಯನ್ನು ಜಾರಿಗೊಳಿಸುವ ಅಗತ್ಯವಿದೆ.

ಮದುವೆಯ ವಲಸೆಯಿಂದ ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಕೂಡ ಮಹಿಳೆಯರು ತಮಗೆ ದುಪ್ಪಟ್ಟಾಗಿ ಮಾರ್ಪಟ್ಟ ಇವನ್ನು ಜವಾಬ್ದಾರಿ ಎಂದು ತಿಳಿದು ಮಹತ್ತರವಾಗಿ ನಿಭಾಯಿಸುತ್ತಾರೆ. ಗಂಡನಿಂದ ವಿಚ್ಛೇದನ ಪಡೆದರೂ, ಗಂಡ ಓಡಿಹೋದರೂ, ಆತ್ಮಹತ್ಯೆ ಮಾಡಿಕೊಂಡರೂ , ಅವನಿಂದ ಆಸ್ತಿ ಸಿಗಲಿ ಬಿಡಲಿ ಅವಳು ಯಾವುದಕ್ಕೂ ಎದೆಗುಂದದೆ ಕಚೇರಿ ಕೆಲಸ, ಮನೆಕೆಲಸ, ಕೂಲಿ ಕೆಲಸಮಾಡಿ, ಹಣ್ಣು ಮಾರಿ ತಮ್ಮ ಮಕ್ಕಳನ್ನು ಸ್ವಾಭಿಮಾನದಿಂದ, ಆತ್ಮವಿಶ್ವಾಸದಿಂದ ಬೆಳಸಿ ಘನತೆಯ ಬದುಕನ್ನು ತನ್ನದಾಗಿಸಿಕೊಳ್ಳುವತ್ತ ದುಡಿಯುತ್ತಾಳೆ.

ಪರಾಮರ್ಶನ ಗ್ರಂಥಗಳು

1. ಶ್ರೀಮತಿ, ಎಚ್.ಎಸ್. *ಮಹಿಳೆ ಮತ್ತು ದುಡಿಮೆ.* ಕನ್ನಡ ವಿವಿ ಹಂಪಿ
2. *2001 ಮತ್ತು 2011 ರ ಜಾತಿ ಜನಗಣತಿ*
3. ಪ್ರಜಾವಾಣಿ. *ಕೌಟುಂಬಿಕ ದೌರ್ಜನ್ಯ ಕಾಯಿದೆ ವರದಿ*